**<u>ದಿನಾಂಕಃ 11.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲುಃ **1** ರಿಂದ **3** ನೇ ಪ್ರತಿ**ವಾದಿ ಪರ** ಶ್ರೀ ಹೆಚ್ ಎನ್ ಬಿ ಎನ್ **ವಕೀಲರಿಂದಃ**</u>

ನಿಪಿ-4 ರ ದಾಖಲಾತಿಯನ್ನು ತಾಲ್ಲೂಕು ಭೂಮಾಪಕರು ತಯಾರಿಸಿದ್ದಾರೆ ಎಂದರೆ ಸರಿ. ನಿಪಿ-4 ರಲ್ಲಿ 6 ಎಕರೆ 13 ಗುಂಟೆ ಜಮೀನು ಗ್ರಾಮ ಠಾಣಾ ವ್ಯಾಪ್ತಿಗೆ ಬರುತ್ತದೆ ಎಂದು ನಮೂದಿಸಿದ್ದಾರೆ ಎಂದರೆ ಸರಿ. ಸದರಿ 6 ಎಕರೆ 13 ಗುಂಟೆ ಜಮೀನು ಸೋಮನಾಥಪುರ ಗ್ರಾಮ ಪಂಚಾಯತಿಗೆ ಸೇರಿದ ಸ್ವತ್ತು ಎಂದರೆ ಸರಿ. ಸದರಿ 6 ಎಕರೆ 13 ಗುಂಟೆ ಜಮೀನಿನಲ್ಲಿ ತಮಡಿಪುರ ಗ್ರಾಮವು ನೆಲೆಸಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ 6 ಎಕರೆ 13 ಗುಂಟೆ ಜಮೀನಿನಲ್ಲಿ ನನಗಾಗಲೀ ಅಥವಾ ಬೇರೆ ವ್ಯಕ್ತಿಗಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ 6 ಎಕರೆ 13 ಗುಂಟೆ ವಿಸ್ತೀರ್ಣದ ಜಾಗದ ಸಮೀಪದಲ್ಲಿ ಜಗಜೀವನ ಗ್ರಾಮ ಇದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸುಮಾರು 150 ಮನೆಗಳು ಇವೆ ಎಂದರೆ ಸಾಕ್ಷಿದಾರರು ಸುಮಾರು 70 ರಿಂದ 80 ಮನೆಗಳು ಇವೆ ಎಂದು ನುಡಿಯುತ್ತಾರೆ. ಸದರಿ ಜಗಜೀವನ ಗ್ರಾಮದ ಜನರಿಗೆ ಶವಸಂಸ್ಕಾರ ಮಾಡಲು ಯಾವುದೇ ಜಾಗ ಅಥವಾ ಸ್ಮಶಾನ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಕಗ್ಗಲೀಪುರ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. ಸದರಿ ಜಗಜೀವನ ಗ್ರಾಮವು ನಮ್ಮ ಊರಿನ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಜಗಜೀವನ ಗ್ರಾಮದ ಗ್ರಾಮಸ್ಥರಿಗೆ ಸ್ಮಶಾನಕ್ಕೆ ಜಾಗ ಇಲ್ಲ ಎಂದು ತಿಳಿದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಜೀವನ ಗ್ರಾಮದ ಗ್ರಾಮಸ್ಥರು ಸ್ಮಶಾನಕ್ಕಾಗಿ 25 ಗುಂಟೆ ಜಮೀನನ್ನು ಮಂಜೂರು ಮಾಡಿ ಎಂದು ಸೋಮನಾಥಪುರ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ಸೋಮನಾಥಪುರ ಗ್ರಾಮ ಪಂಚಾಯತಿಯವರು ದಿನಾಂಕ 26.03.2021 ರಂದು ಗ್ರಾಮ ಸಭೆಯಲ್ಲಿ ಸ್ಮಶಾನದ ಜಾಗದ ವಿಚಾರವನ್ನು ಮಂಡಿಸಿದ್ದಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು, ಸದರಿ ವಿಚಾರದ ಬಗ್ಗೆ ನಮಗೆ ಯಾವುದೇ ತಿಳುವಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ನಂತರ ದಿನಾಂಕ 03.04.2021 ರಂದು ಸೋಮನಾಥಪುರ ಗ್ರಾಮ ಪಂಚಾಯತಿಯವರು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು

ಜಗಜೀವನ ಗ್ರಾಮದ ಗ್ರಾಮಸ್ಥರಿಗೆ 25 ಗುಂಟೆ ಜಾಗವನ್ನು ಸ್ಮಶಾನದ ಉದ್ದೇಶಕ್ಕಾಗಿ ಮಂಜುರಾತಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು, ಸದರಿ ವಿಚಾರದ ಬಗ್ಗೆ ಮತ್ತು ಮಂಜೂರಾತಿಯ ಬಗ್ಗೆ ನಮಗೆ ಯಾವುದೇ ರೀತಿಯ ತಿಳುವಳಿಕೆ ಪತ್ರ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ಸದರಿ 25 ಗುಂಟೆ ಜಾಗವನ್ನು ಜಗಜೀವನ ಗ್ರಾಮದ ಗ್ರಾಮಸ್ಥರ ಸ್ಮಶಾನದ ಉದ್ದೇಶಕ್ಕಾಗಿ ಖಾತೆ ವರ್ಗಾವಣೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 25 ಗುಂಟೆ ಜಾಗದಲ್ಲಿ ಜಗಜೀವನ ಗ್ರಾಮದ ಗ್ರಾಮಸ್ಥರು ಸ್ಮಶಾನವಾಗಿ ಬಳಸಿಕೊಂಡು ಶವ ಸಂಸ್ಕಾರ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ 25 ಗುಂಟೆ ಜಾಗದಲ್ಲಿ ಜಗಜೀವನ ಗ್ರಾಮದ ಗ್ರಾಮಸ್ಥರು ಸುಮಾರು 15 ಜನಗಳ ಶವ ಸಂಸ್ಕಾರ ನೆರವೇರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ತಿಳಿದಿದ್ದರೂ ಸಹ ಪ್ರತಿವಾದಿಗಳಿಗೆ ನಾನು ಅನಾವಶ್ಯಕವಾಗಿ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ಕಾನೂನಿನ ಪ್ರಕಾರ ಗ್ರಾಮ ಪಂಚಾಯತಿ ಕಾಯ್ದೆಯ ಅಡಿಯಲ್ಲಿ ಮತ್ತು ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 25 ಗುಂಟೆ ಸ್ಮಶಾನದ ಜಾಗದಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಸದರಿ ಸ್ಮಶಾನದ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಾವಾ ಅನುಸೂಚಿ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನತೆ ಹೊಂದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ 5 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ